**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 266/2025**

| | | | |
|---|---|---|---|
| ಹೆಸರು | | ಶ್ರೀ ರಾಜು | ಚಾಸಾಃ 03 |
| ತಂದೆ ಹೆಸರು | | ಶ್ರೀ ಲೇಟ್ ಶಿವಪ್ಪ | ಫ್ರಾಸಾಃ 02 |
| ವಯಸ್ಸು | | 45 ವರ್ಷ | ಸಾಕ್ಷಿಯನ್ನು ದಿನಾಂಕಃ 07.03.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಅಂಚಿಪುರ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನನ್ನ ಸಮಕ್ಷಮ ಯಾವುದೆ ಮಹಜರ್ ಮಾಡಿರುವುದಿಲ್ಲ. ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಬಿ) ಎಂದು ಗುರ್ತಿಸಲಾಯಿತು. ಎರಡು ಫೋಟೋಗಳನ್ನು ನಿಪಿ2 ಮತ್ತು 3 ಎಂದು ಗುರುತಿಸಲಾಯಿತು. ನಿಪಿ1 ರಿಂದ 3 ರ ವಿಷಯ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ 28.05.2025 ರಂದು ಸಂಜೆ 7.15 ಕ್ಕೆ ನಾನು ಮತ್ತು ಚಾಸಾ-3 ರವರು ಬೇಗೂರು ಪೊಲೀಸ್ ಠಾಣೆಯ ಮುಂದೆ ಇರುವ ಟೀ ಅಂಗಡಿಯ ಮುಂದೆ ನಿಂತಿದ್ದೇವು ಎಂದರೆ ಸರಿ.

ಪೊಲೀಸರು ಕರೆದ ಮೇರೆಗೆ ಅವರ ಜೊತೆಯಲ್ಲಿ ಹೋದೇವು ಎಂದರೆ ಸರಿ. ಬೇಗೂರು ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿ ಜಾನುವಾರುಗಳನ್ನು ಖರೀದಿ ಮಾಡಿ ತಮಿಳುನಾಡಿನ ಕಸಾಯಿ ಖಾನೆಗೆ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ಇದೆ ದಾಳಿ ಮಾಡುವ ಕಾಲಕ್ಕೆ ಪಂಚರಾಗುವಂತೆ ಪೊಲೀಸರು ನಮ್ಮನ್ನು ಕೋರಿಕೊಂಡ ಮೇರೆಗೆ ನಾವು ಒಪ್ಪಿಕೊಂಡ ಮೇರೆಗೆ ನೋಟೀಸ್ ಜಾರಿ ಮಾಡಿದರು ಎಂದರೆ ಸರಿಯಲ್ಲ. ನಂತರ ನಮ್ಮನ್ನು ಇಲಾಖಾ ವಾಹನದಲ್ಲಿ ಕೂಡಿಸಿಕೊಂಡು ಯಡೆಯಾಲ-ಬೇಗೂರು ರಸ್ತೆಯ ಉಫ್ಕೋ ಪರ್ಟಲೈಸರ್ ಪ್ಯಾಕ್ಟರಿಯ ಮುಂಭಾಗ ಜೀಪನ್ನು ಮರೆಯಾಗಿ ನಿಲ್ಲಿಸಿ, ರಸ್ತೆಯ ಅಂಚಿನಲ್ಲಿ ಕಾಯುತ್ತಿದ್ದಾಗ ಸುಮಾರು ರಾತ್ರಿ 7.15 ರ ಸಮಯದಲ್ಲಿ ಸದರಿ ರಸ್ತೆಕಡೆಯಿಂದ ಕೆಎ-10-ಎ-1292 ಸಂಖ್ಯೆಯ ಗೂಡ್ಸ್ ಆಟೋ ಬರುತ್ತಿದ್ದು, ಅದನ್ನು ನಮ್ಮ ಸಮಕ್ಷಮ ತಡೆದು ಪೊಲೀಸರು ಪರಿಶೀಲಿಸಲಾಗಿ ಅಲ್ಲಿ ನಾಲ್ಕು ಜಾನುವಾರುಗಳು ಕಂಡುಬಂದವು ಎಂದರೆ ಸರಿಯಲ್ಲ. ಸದರಿ ಜಾನುವಾರುಗಳನ್ನು ಒಂದಕ್ಕೊಂದು ಹಿಂಸೆಯಾಗುವ ರೀತಿ ಕಟ್ಟಿದ್ದರು ಎಂದರೆ ಸರಿಯಲ್ಲ.

ವಾಹನದಲ್ಲಿದ್ದ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ಚಂದ್ರು ಅಲಿಯಾಸ್ ಚಂದನ್ ಬಿನ್ ಕರಿಯಯ್ಯ ಎಂದು ತಿಳಿಯಿತು ಎಂದರೆ ಸರಿಯಲ್ಲ. ಜಾನುವಾರುಗಳನ್ನು ಪರಿಶೀಲಿಸಲಾಗಿ
ಒಂದು ಬಿಳಿ ಬಣ್ಣದ ಒಂದು ದೊಡ್ಡ ನಾಡ ಹಸು
ಒಂದು ಕಂದು ಬಣ್ಣ ಮಿಶ್ರಿತ ನಾಡ ಹಸು
ಒಂದು ಬಿಳಿ ಬಣ್ಣದ ಕರು
ಒಂದು ಕಂದು ಬಣ್ಣದ ಕರು ಇದ್ದವು ಎಂದರೆ ಸರಿಯಲ್ಲ. ಅವುಗಳ ಒಟ್ಟು ಬೆಲೆ 40 ಸಾವಿರ ಎಂದು ಅಂದಾಜಿಸಲಾಯಿತು ಎಂದರೆ ಸರಿಯಲ್ಲ.

ಸದರಿ ಜಾನುವಾರುಗಳನ್ನು ಸಾಗಿಸಲು ಪರವಾನಗೆ ಮತ್ತು ವೈದ್ಯಕೀಯ ಪ್ರಮಾಣ ಪತ್ರ ಇದೇಯಾ ಎಂದು ಕೇಳಲಾಗಿ ಯವುದೆ ಪರವಾನಗೆ ಇಲ್ಲ ಎಂದು ಹೇಳಿರುತ್ತಾನೆ. ಆರೋಪಿಯು

ಬೇಗೂರು ಮತ್ತು ಅಕ್ಕಪಕ್ಕದ ಗ್ರಾಮಗಳಲ್ಲಿ ಕಡಿಮೆ ಬೆಲೆಗೆ ಖರೀದಿ ಮಾಡಿ ತಮಿಳುನಾಡಿನ ರಾಜ್ಯದ ಕಡೆ ಇರುವ ಕಸಾಯಿ ಖಾನೆಗೆ ಜಾನುವಾರುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ತೆರಕಣಾಂಬಿ ಮಾರ್ಗವಾಗಿ ಹೋಗುವುದಾಗಿ ತಿಳಿಸಿದ ಎಂದರೆ ಸರಿಯಲ್ಲ. ಸದರಿ ಜಾನುವಾರು, ವಾಹನ ಮತ್ತು ಆರೋಪಿಯನ್ನು ವಶಕ್ಕೆ ಪಡೆದು ರಾತ್ರಿ 7.45 ರಿಂದ 8.30 ರವರೆಗೆ ಮಹಜರ್ ಜರುಗಿಸಿದರು ಎಂದರೆ ಸರಿಯಲ್ಲ. ಸದರಿ ಮಹಜರ್ ಗೆ ನಾನು ಮತ್ತು ಚಾಸಾ–3 ರವರು ಸ್ಥಳದಲ್ಲೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ1 ರ ವಿಷಯವನ್ನು ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ1 ರ ಕಾಲಕ್ಕೆ ನಿಪಿ2 ಮತ್ತು 3 ರಂತೆ ಫೋಟೋ ತೆಗೆದರು ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ದಿಃ 29.05.2025 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ5 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಇರುವುದಿಲ್ಲ:**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**